# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.23 ರ ನಾಗವಾರಕ್ಕೆ ಸಂಬಂಧಿಸಿದಂತೆ ದಿನಾಂಕ: 06.08.2022 ರಂದು ಶ್ರೀ.ಡಾ॥ಧನ್ಯಕುಮಾರ್ ನೋಡಲ್ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದವರ ವಿವರ:-**

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ಡಾ॥ಧನ್ಯಕುಮಾರ್ | ನೋಡಲ್ ಅಧಿಕಾರಿಗಳು ಮತ್ತು ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ.23 ನಾಗವಾರ |
| 2 | ಶ್ರೀ.ನಾಗರಾಜು | ಸಹಾಯಕ ಅಭಿಯಂತರರು & ಕಾರ್ಯದರ್ಶಿಗಳು ವಾರ್ಡ್ ಸಂಖ್ಯೆ.23 ನಾಗವಾರ |
| 3 | ಡಾ॥ಶೋಭಾ.ಎನ್ | ವೈದ್ಯಾಧಿಕಾರಿಗಳು ಕೆ.ಜಿ.ಹಳ್ಳಿ ಯು.ಪಿ.ಹೆಚ್.ಸಿ |
| 4 | ಶ್ರೀ.ಎ.ರಾಯಪ್ಪ | ಹಿರಿಯ ಆರೋಗ್ಯ ನಿರೀಕ್ಷಕರು |
| 5 | ಶ್ರೀ.ಸತೀಶ್.ಜಿ | ಕಿರಿಯ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ (ಫ್ರೆಜರ್‌ಟೌನ್) |
| 6 | ಶ್ರೀ.ಆರ್.ಮಂಜುನಾಥ್ | ವಾಟರ್ ಇನ್ಸ್‌ಪೆಕ್ಟರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 7 | ಶ್ರೀ.ಎನ್.ಸಲೀಂ ಖಾನ್ | ಕರ ವಸೂಲಿಗಾರರು |
| 8 | ಶ್ರೀ.ದಿಲೀಪ್ | ಮೀಟರ್ ರೀಡಿಂಗ್ ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 9 | Beulah.P | ಶಿಕ್ಷಕರು ಕಲ್ಯಾಣ ಇಲಾಖೆ (ಪೂರ್ವ) ವಿಭಾಗ |
| 10 | ಶ್ರೀ.ರಾಜೇಶ್ | ಮಾರ್ಷಲ್ |
| 11 | ಶ್ರೀ.ಚಂದ್ರಶೇಖರ್ .ಪಿ | ಬೀದಿದೀಪ ನಿರ್ವಹಣೆ |
| 12 | ಶ್ರೀಮತಿ.ಉಮಾದೇವಿ | ಕೆ.ಜಿ.ಹಳ್ಳಿ ಯು.ಪಿ.ಹೆಚ್.ಸಿ |
| 13 | ಶ್ರೀ.ಟಿ.ಶಿವಕುಮಾರ್ | ಸ್ಥಳೀಯರು |
| 14 | ವಾರ್ಡ್‌ನ ಸ್ಥಳೀಯರು / ಸದಸ್ಯರುಗಳು | |

ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಮತ್ತು ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸ್ವಾಗತಿಸುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

ಮೊದಲನೆಯದಾಗಿ ವಾರ್ಡ್‌ನ ನೋಡಲ್ ಅಧಿಕಾರಿರವರು ಮಾತನಾಡುತ್ತಾ ವಾರ್ಡ್ ವ್ಯಾಪ್ತಿಯಲ್ಲಿ ನಮ್ಮ ರಾಷ್ಟ್ರೀಯ ಹಬ್ಬವಾದ ಸ್ವಾತಂತ್ರ್ಯ ದಿನಾಚರಣೆಯನ್ನು ಹರ್ ಘರ್ ತಿರಂಗ್ 75ನೇ ವಾರ್ಷಿಕೋತ್ಸವದ ಹಬ್ಬವನ್ನು ನೆರವೇರಿಸಲು ಅಧಿಕಾರಿಗಳಿಗೆ ವಿತರಿಸಲಾದ ಫ್ಲಾಗ್‌ಗಳನ್ನು ಮನೆಮನೆಗಳಿಗೆ ಸಮರ್ಪಕವಾಗಿ ವಿತರಿಸಲು ವಾರ್ಡ್‌ನ ನೋಡಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

**<u>1) ಆರೋಗ್ಯ ವೈದ್ಯಾಧಿಕಾರಿಗಳು:-</u>** ವಾರ್ಡ್‌ನ ನಾಗವಾರ ಪ್ರದೇಶದಲ್ಲಿ 18 ವಯಸ್ಸು ಮೇಲ್ಪಟ್ಟ ಎಲ್ಲಾ ಸಾರ್ವಜನಿಕರಿಗೂ ಬೂಸ್ಟರ್ ಡೋಸ್‌ಗಳನ್ನು ನೀಡಲು ಹಾಗೂ ಅವಶ್ಯಕವಿದ್ದಲ್ಲಿ ಕ್ಯಾಂಪ್ ವ್ಯವಸ್ಥೆ ಮಾಡಲು ಅಧಿಕಾರಿಗಳಿಗೆ ಸಭೆಯಲ್ಲಿ ಹಾಜರಿದ್ದ ವೈದ್ಯಾಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ರವರು ಸಭೆಯಲ್ಲಿ ತಿಳಿಸಿದರು ಹಾಗೂ ಸೇಟ್‌ಲೇನ್, ಸಮಧಾನನಗರ, ಚೂನಾಲೇನ್, ಹಾಗೂ ಅಧಿಕ ಹೆಚ್ಚಿನ ಜನಸಂದಣಿ ಇರುವ ಪ್ರದೇಶಗಳಿಗೆ ಸೊಳ್ಳೆಗಳ ಹಾವಳಿ ಹೆಚ್ಚಾಗಿದ್ದು, ಶುಶ್ರೂಶಕರು ಹಾಗೂ ಆಶಾ ಕಾರ್ಯಕರ್ತೆಯರನ್ನು ಸರ್ಕಾರಿ ಶಾಲೆ, ಖಾಸಗಿ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಆರೋಗ್ಯ ತಪಾಸಣೆ ನಡೆಸಬೇಕೆಂದು ಹಾಗೂ ವಾರ್ಡ್‌ನ ವ್ಯಾಪ್ತಿಯಲ್ಲಿ ಫಾಗಿಂಗ್ ಮತ್ತು ಸ್ಪ್ರೇಯಿಂಗ್ ಸಿಂಪಡಿಸಬೇಕೆಂದು ಹಾಗೂ ಡೇಂಗ್ಯೂ ಜ್ವರದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಬೇಕೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

**<u>(ಕ್ರಮ:- ಆರೋಗ್ಯ ವೈದ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ಬಿ.ಬಿ.ಎಂ.ಪಿ)</u>**

2) <u>ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ (ಬಿ.ಡಬ್ಲ್ಯೂ.ಎಸ್.ಎಸ್.ಬಿ)</u>:- ವಾರ್ಡ್ ವ್ಯಾಪ್ತಿಯಲ್ಲಿ ಮಳೆಗಾಲವಿರುವುದರಿಂದ ರಸ್ತೆ ಒಳಚರಂಡಿಗಳು ಬ್ಲಾಕ್ ಆಗುತ್ತಿದ್ದು, ಅದನ್ನು ಸರಿಪಡಿಸಿ ನೀರನ್ನು ಸರಾಗವಾಗಿ ಹರಿಯುವಂತೆ ಮಾಡುವುದು ಹಾಗೂ ಕಾಲರಾ ಮತ್ತು ಇನ್ನಿತರೆ ರೋಗಗಳು ಬರುವ ಸಂಭವವಿರುವುದರಿಂದ ಅದನ್ನು ತಡೆಗಟ್ಟಲು ಕಾಮಗಾರಿಯನ್ನು ನಿರ್ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ರವರಿಗೆ ವಾರ್ಡ್‌ನ ನೋಡಲ್ ಅಧಿಕಾರಿಗಳು ತಿಳಿಸಿದರು.

<u>(ಕ್ರಮ :- ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ ಉಪ-ವಿಭಾಗ, ಕಲ್ಯಾಣನಗರ)</u>

3) <u>ವಿದ್ಯುತ್ ವಿಭಾಗ:-</u> ವಾರ್ಡ್ ವ್ಯಾಪ್ತಿಯ ವೀರಣ್ಣಪಾಳ್ಯ ಸುತ್ತಮುತ್ತಲಿನ ಪ್ರದೇಶದಲ್ಲಿ ಬೀದಿದೀಪಗಳು ಸರಿಯಾಗಿ ನಿರ್ವಹಣೆಯಾಗದೇ ಇರುವುದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿರುತ್ತದೆ. ಈ ಬಗ್ಗೆ ಸದರಿ ಪ್ರದೇಶದಲ್ಲಿ ಕೂಡಲೇ ವಿದ್ಯುತ್ ದೀಪಗಳನ್ನು ಅಳವಡಿಸಬೇಕೆಂದು ಸಭೆಯಲ್ಲಿ ತಿಳಿಸಿರುತ್ತಾರೆ ಹಾಗೂ ಗೋವಿಂದಪುರ ಮುಖ್ಯರಸ್ತೆ, ಗೋವಿಂದಪುರ ಪೋಲೀಸ್ ಠಾಣೆ ಹತ್ತಿರ ಕಂಬಗಳಿಂದ 5 ಅಡಿ ಎತ್ತರಕ್ಕೆ ತಂತಿಯನ್ನು ಅಳವಡಿಸಿರುತ್ತಾರೆ. ತಂತಿಗಳು ಕಟ್ಟಾಗಿ ಸಾರ್ವಜನಿಕರಿಗೆ ತೊಂದರೆಯಾಗುವುದಾಗಿ ತಿಳಿಸಿದರು.

ಈ ಬಗ್ಗೆ ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

<u>(ಕ್ರಮ :- ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ, 16ನೇ ಮಹಡಿ ಮೆಯೋಹಾಲ್, ಪಿ.ಯು.ಬಿ ಕಟ್ಟಡ)</u>

4) <u>ಘನತ್ಯಾಜ್ಯ ನಿರ್ವಹಣೆ</u>:- ವಾರ್ಡ್ ವ್ಯಾಪ್ತಿಯ, ಹಿದಾಯತ್ ನಗರ, ಲಿಡ್ಕರ್ ಕಾಲೋನಿ, ಎ.ಎಂ.ಸಿ ರಸ್ತೆಗಳಲ್ಲಿ ಘನತ್ಯಾಜ್ಯ ನಿರ್ವಹಣೆಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಹಾಗೂ ಘನತ್ಯಾಜ್ಯ ಪಾಯಿಂಟ್‌ಗಳ ಹತ್ತಿರ ಆಟೋಗಳಲ್ಲಿ ಮತ್ತು ವಾಹನಗಳಲ್ಲಿ ಅಪರಿಚಿತರು ಕಸದ ರಾಶಿಯನ್ನು ಸುರಿಯುತ್ತಿದ್ದಾರೆಂದು ಸಾರ್ವಜನಿಕರು ಸಭೆಯಲ್ಲಿ ತಿಳಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ವಿಭಾಗ ರವರಿಗೆ ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ನೋಡಲ್ ಅಧಿಕಾರಿರವರು ಸೂಚಿಸಿರುತ್ತಾರೆ.

<u>(ಕ್ರಮ :-ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ಸರ್ವಜ್ಞನಗರ ವಿಭಾಗ ಬೆಂಗಳೂರು)</u>

ಮುಂದುವರೆದು ದಿನಾಂಕ: 06-08-2022 ರಂದು ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗಿರುವ ಪೋಲೀಸ್ ಇಲಾಖೆ, ಸಂಚಾರಿ ಪೋಲೀಸ್ ಠಾಣೆ ಇಲಾಖೆ, ತೋಟಗಾರಿಕೆ ಇಲಾಖೆ, ಅರಣ್ಯ ಇಲಾಖೆ, ಅಧಿಕಾರಿಗಳನ್ನು ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೇ ಹಾಜರಾಗಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಮೇಲಾಧಿಕಾರಿಗಳಿಗೆ ವರದಿ ಮಾಡಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.
ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ವಂದನೆಗಳೊಂದಿಗೆ,**

**ಶ್ರೀ.ನಾಗರಾಜು**
ಕಾರ್ಯದರ್ಶಿಗಳು
ವಾರ್ಡ್ ಸಂಖ್ಯೆ.23 ನಾಗವಾರ

**(ಶ್ರೀ.ಧನ್ಯಕುಮಾರ್)**
ನೋಡಲ್ ಅಧಿಕಾರಿ & ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ.23 ನಾಗವಾರ

<u>ಪ್ರತಿಯನ್ನು:</u>

1. ಕೌನ್ಸಿಲ್ ಕಾರ್ಯದರ್ಶಿಗಳು ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪೂರ್ವ) ರವರಅವಗಾಹನೆಗಾಗಿ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು (ಎಲೆಕ್ಟ್ರಿಕಲ್) ವಿದ್ಯುತ್ ವಿಭಾಗ, 16ನೇ ಮಹಡಿ, ಪಿ.ಯು.ಬಿ ಬಿಲ್ಡಿಂಗ್, ಮೆಯೋಹಾಲ್, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ, ಸರ್ವಜ್ಞನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕಲ್ಯಾಣನಗರ ಉಪ-ವಿಭಾಗ ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಆರೋಗ್ಯ ವೈಧ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಕಛೇರಿ ಕಡತಕ್ಕೆ.